


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

| Rtn. K. Palaksha<br>District Governor 2025-26 | Rtn. Anand R.<br>President, Mob: 99800 93066 | Rtn. Vishwas Y.<br>Secretary, Mob : 99800 63180 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –21 ದಿನಾಂಕ : 03-12-2025


**ದಿನಾಂಕ: 03.12.2025 ರಂದು ರೋಟರಿ ಕ್ಲಬ್ ಶಿವಮೊಗ್ಗದಲ್ಲಿ ಒಂದು ರೀತಿಯ ಹಬ್ಬದ ವಾತಾವರಣ. ಏಕೆಂದರೆ ಅಂದು ನಮ್ಮ ರೋಟರಿ ಜಿಲ್ಲೆ 3182ರ ಜಿಲ್ಲಾ ಗವರ್ನರ್ ರೊ. ಕೆ. ಪಾಲಾಕ್ಷರವರು ನಮ್ಮ ಕ್ಲಬ್‌ಗೆ ಅಧಿಕೃತ ಭೇಟಿ ನೀಡಿದ ಸಂದರ್ಭ.**

**ಅಂದು ಬೆಳಗಿನಿಂದಲೇ ಕ್ಲಬ್‌ನ ಹಲವಾರು ಕಾರ್ಯಕ್ರಮಗಳಲ್ಲಿ ಅವರು ಭಾಗಿಯಾಗಿದ್ದರು. ಬೆಳಿಗ್ಗೆ 8.30 ಕ್ಕೆ ರೋಟರಿ ಯುವಕೇಂದ್ರದ ಆವರಣದಲ್ಲಿ ಗವರ್ನರ್‌ರವನ್ನು ಬರಮಾಡಿಕೊಳ್ಳಲಾಯಿತು. ಬೆಳಗಿನ ಉಪಹಾರದ ನಂತರ ಅಧ್ಯಕ್ಷರಾದ ರೊ.ಆರ್. ಆನಂದ್, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ, ಸಹಾಯಕ ಗವರ್ನರ್ ರೊ. ಕೆ.ಪಿ. ಶೆಟ್ಟಿ, ವಲಯ ಸೇನಾನಿ, ರೊ. ಸರ್ಜಾ ಜಗದೀಶ್, ಮುಂದಿನ ಸಾಲಿನ ಅಧ್ಯಕ್ಷರಾದ ರೊ.ಎನ್. ಗೋಪಿನಾಥ್‌ರ ಜೊತೆಗೂಡಿ ಗವರ್ನರ್ ರೊ. ಕೆ. ಪಾಲಾಕ್ಷರವರೊಂದಿಗೆ ಕ್ಲೋಸ್ ಡೋರ್ ಸಭೆಯಾದ ನಂತರ ಕ್ಲಬ್ ಅಸೆಂಬ್ಲಿ ಪ್ರಾರಂಭವಾಯಿತು. ಬೆಳಿಗ್ಗೆ 11.30 ಕ್ಕೆ ಆನಂದಪುರಕ್ಕೆ ಹತ್ತಿರವಿರುವ ಗೌತಮಪುರ ಶಾಲೆಯು ಗ್ಲೋಬಲ್ ಗ್ರಾಂಟ್ ಯೋಜನೆಯಡಿಯಲ್ಲಿ ಸುಮಾರು 40 ಲಕ್ಷರೂಗಳ ವೆಚ್ಚದ ನವೀಕರಣಗೊಂಡ ಶಾಲಾ ಕಟ್ಟಡ, ಪೀಠೋಪಕರಣ, ಶೌಚಾಲಯ ಮತ್ತು ಕಂಪ್ಯೂಟರ್‌ಗಳನ್ನು ನಮ್ಮ ರೋಟರಿ ಜಿಲ್ಲೆ 3182 ರ ಗವರ್ನರ್ ರೊ. ಪಾಲಾಕ್ಷರವರು ಕಾರ್ಯಕ್ರಮ ಉದ್ಘಾಟಿಸಿ ಲೋಕಾರ್ಪಣೆ ಮಾಡಿದರು.**

**ಸಂಜೆ 7.30 ಕ್ಕೆ ರೋಟರಿ ಯುವಕೇಂದ್ರದಲ್ಲಿ ಗವರ್ನರ್ ರೊ.ಕೆ.ಪಾಲಾಕ್ಷರವರ ಸಮ್ಮುಖದಲ್ಲಿ ಸಾರ್ವಜನಿಕ ಕಾರ್ಯಕ್ರಮ ಏರ್ಪಾಡಾಗಿತ್ತು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾದ ಜಿಲ್ಲಾ ಗವರ್ನರ್ ರೊ. ಕೆ.ಪಾಲಾಕ್ಷರವರು, ಅಧ್ಯಕ್ಷರಾದ ರೊ.ಆರ್.ಆನಂದ್, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ, ಸಹಾಯಕ ಗವರ್ನರ್ ರೊ. ಕೆ.ಪಿ.ಶೆಟ್ಟಿ, ವಲಯ ಸೇನಾನಿ, ರೊ. ಜಗದೀಶ್ ಸರ್ಜಾರವರು ಮತ್ತು ರೋಟರಿ ಜಿಲ್ಲೆಯ ಪ್ರಥಮ ಮಹಿಳೆ ರೊ. ರೇಖಾ ಪಾಲಾಕ್ಷರವರು ಉಪಸ್ಥಿತರಿದ್ದರು.**

ಪ್ರಾರಂಭದಲ್ಲಿ ರೊ.ಸುಮಲತಾ ಭೂಪಾಳಂರವರಿಂದ "ನೀಡು ಶಿವ ನೀಡದಿರೂ ಶಿವ ಬಾಗುವುದು ನನ್ನ ಕಾಯ" ಗೀತೆಯ ಸುಶ್ರಾವ್ಯ ಪ್ರಾರ್ಥನೆಯಿಂದ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. 2026–27 ನೇ ಸಾಲಿನ ಅಧ್ಯಕ್ಷರಾದ ರೊ.ಎನ್. ಗೋಪಿನಾಥರವರು ಸರ್ವರನ್ನು ಸ್ವಾಗತಿಸಿದರು. ಸಹ ಕಾರ್ಯದರ್ಶಿ ರೊ.ಶ್ರೀಕಾಂತ್ ನಾಡಿಗ್‌ರವರು ಮುಖ್ಯ ಅತಿಥಿಗಳಾದ ಗವರ್ನರ್ ರೊ.ಪಾಲಾಕ್ಷರವರ ಪರಿಚಯ ಮಾಡಿದರು. ಕಾರ್ಯಕ್ರಮವನ್ನು ವೇದಿಕೆಯ ಮೇಲಿನ ಸರ್ವರೂ ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ರೊ. ಶೈಲಿನ್‌ರವರು ತಮ್ಮ ವಿಶೇಷ ಶೈಲಿಯಿಂದ ರೋಟರಿ ಸದಸ್ಯರ ಹುಟ್ಟು ಹಬ್ಬದ ಶುಭಾಶಯಗಳು ಮತ್ತು ವಿವಾಹ ವಾರ್ಷಿಕೋತ್ಸವದ ಶುಭಾಶಯಗಳನ್ನು ಕೋರಿದರು. ಹುಟ್ಟು ಹಬ್ಬಕ್ಕೆ ಶುಭ ಕೋರುತ್ತಾ, ನಿಮ್ಮ ಕನಸುಗಳು ನನಸಾಗಲಿ, ನಿಮ್ಮ ಈ ವರ್ಷದ ಹೊಸ ಪ್ರಯಾಣ ಸುಖಕರವಾಗಲಿ. ಸಮೃದ್ಧಿಯನ್ನು ತರಲಿ ಎಂದು ಹಾರೈಸಿದರು. ಜೊತೆಗೆ ದಂಪತಿಗಳಿಗೆ ಹಾರೈಸುತ್ತಾ ನಿಜವಾದ ಪ್ರೀತಿ ಎಂದೆಂದೂ ಅಮರ, ಕಾಲಚಕ್ರ ಉರುಳಿದಂತೆ ಅದು ಇನ್ನಷ್ಟು ಗಾಢ ಹಾಗೂ ಪರಿಶುದ್ಧವಾಗುತ್ತದೆ ಎಂದು ಶುಭ ಹಾರೈಸುತ್ತಾ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ರೊ. ಹೆಚ್.ಎಸ್. ಮೋಹನ್‌ರವರು ಹುಟ್ಟು ಹಬ್ಬದ




ಶುಭಾಶಯಗಳನ್ನು ವೇದಿಕೆಗೆ ಆಗಮಿಸಿ ಸ್ವೀಕರಿಸಿದರು. ವಿವಾಹ ವಾರ್ಷಿಕೋತ್ಸವ ಪ್ರಯುಕ್ತ ರೊ. ದೀಪಕ್ ಕೋರಿ ಮತ್ತು ಶ್ರೀಮತಿ ವಿದ್ಯಾರಾಣಿ, ರೊ.ಡಿಎಸ್. ನಟರಾಜ್ ಮತ್ತು ಶ್ರೀಮತಿ ಪದ್ಮಾ ನಟರಾಜ್, ರೊ. ಸಿ.ಬಿ. ವೀರಣ್ಣ ಮತ್ತು ಶ್ರೀಮತಿ ಛಾಯ, ರೊ. ಆರ್.ಆನಂದ್ ಮತ್ತು ರೊ.ಶ್ರೀಲಕ್ಷ್ಮಿ ಮತ್ತು ರೊ.ಡಿ.ಪಿ.ಮೋಹನ್ ಮತ್ತು ಶ್ರೀಮತಿ ಸುನೀತಾ ಮೋಹನ್‌ರವರು ವೇದಿಕೆಗೆ ಆಗಮಿಸಿ ನೆನಪಿನ ಕಾಣಿಕೆಯೊಂದಿಗೆ ಶುಭಾಶಯಗಳನ್ನು ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ ರೊ.ಬಿ.ಎಸ್. ಮಹಾದೇವ್ ಮತ್ತು ರೊ. ನಿರ್ಮಲಾ ಮಹದೇವ್‌ರವರು ಅಂದಿನ ಇಡೀ ದಿನದ ಕಾರ್ಯಕ್ರಮದ ತಿಂಡಿ ಊಟೋಪಚಾರದ ವ್ಯವಸ್ಥೆ ಮಾಡಿರುವ ಬಗ್ಗೆ ಅಧ್ಯಕ್ಷರು ಪ್ರಕಟಿಸಿ, ಅವರನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಿದರು ಮತ್ತು ಕುಂಸಿ ಆರ್.ಸಿ.ಸಿ.ಯ ವೇದಾಂತ್‌ರವರನ್ನು ವೇದಿಕೆಗೆ ಆಹ್ವಾನಿಸಿ ಹೂಗುಚ್ಛ ನೀಡಲಾಯಿತು. ಕ್ಲಬ್‌ನ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಈವರೆಗೆ ಕ್ಲಬ್‌ನಿಂದ ಆಗಿರುವ ಕಾರ್ಯಗಳ ವರದಿಯನ್ನು ಬಹು ಸಂಕ್ಷಿಪ್ತವಾಗಿ ಸಭೆಗೆ ತಿಳಿಸಿದರು.

**ಹೊಸ ಸದಸ್ಯರ ಸೇರ್ಪಡೆ :** ರೊ.ಎನ್.ವಿ.ಭಟ್‌ರವರು ನೂತನ ಸದಸ್ಯರ ಪರಿಚಯ ಮಾಡಿಕೊಟ್ಟು ರೋಟರಿ ಸೇರ್ಪಡೆಗೆ ಅನುವು ಮಾಡಿಕೊಟ್ಟರು. ಶ್ರೀ ಉದಯನಾಯ್ಕ್‌ರವರು ನೂತನ ಸದಸ್ಯರಾಗಿ ಗವರ್ನರ್‌ರವರಿಂದ ರೋಟರಿ ಪಿನ್ ಮತ್ತು ರೋಟರಿ ಸಾಹಿತ್ಯ ಪಡೆಯುವುದರ ಮೂಲಕ ರೋಟರಿ ಸದಸ್ಯತ್ವ ಪಡೆದರು. ಅವರೊಂದಿಗೆ ಅವರ ಪತ್ನಿ ಶ್ರೀಮತಿ ವಾಣಿಯವರೂ ಸಹ ಇದ್ದರು.

## ಈ ವಾರದ ಸಭೆ

**ದಿನಾಂಕ: 10–12–2025, ಬುಧವಾರ** **ಸಂಜೆ 6:45 ಗಂಟೆಗೆ**

**ಅತಿಥಿ: ಡಾ. ಚಿತ್ರಲೇಖಾ ವಿ. ಕೃಷ್ಣ,** M.D.(Ayu)

**Ayurveda Consultant and Counsellor Specialist in Women Comprehensive Healthcare, Sri Sadguru Chikitsalaya, Shivamogga**

**ವಿಷಯ: 'ರೋಗ ತಡೆಗಟ್ಟುವಿಕೆ ಮತ್ತು ಚಿಕಿತ್ಸೆ'**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ













ರೋಟರಿ ಟಿ.ಆರ್.ಎಫ್ ಸಮಿತಿ ಚೇರ್ಮನ್ ರೊ. ಎಸ್.ಜಿ. ಗೋಪಾಲ್‌ರವರು ಈ ಸಾಲಿನಲ್ಲಿ ರೋಟರಿ ಫೌಂಡೇಷನ್‌ಗೆ ದೇಣಿಗೆ ನೀಡಿದವರ ಹೆಸರುಗಳನ್ನು ಪ್ರಕಟಿಸಿದರು. ಅವರುಗಳನ್ನು ವೇದಿಕೆಗೆ ಆಹ್ವಾನಿಸಿ, ಗವರ್ನರ್‌ರವರಿಂದ ಹೂ ಗುಚ್ಛ ಕೊಡಿಸಲಾಯಿತು. ಸಭೆಯಲ್ಲಿ ನಮ್ಮ ಕ್ಲಬ್‌ನ ಭೀಷ್ಮರೆಂದೇ ಖ್ಯಾತರಾದ, ಪೋಲಿಯೋ ನಾರಾಯಣರೆಂದೇ ಪ್ರಸಿದ್ಧರಾದ, ನಮ್ಮ ಕ್ಲಬ್‌ನ ಹಲವಾರು ಗ್ಲೋಬಲ್ ಗ್ರಾಂಟ್‌ನ ರುವಾರಿಗಳಾದ ರೊ.ಪಿಡಿಜಿ. ಡಾ.ಪಿ.ನಾರಾಯಣರವರಿಗೆ ಇತ್ತೀಚೆಗೆ ರಾಷ್ಟ್ರೀಯ ಕಾರ್ಯಕ್ರಮವೊಂದರಲ್ಲಿ ಪೋಲಿಯೋ ನಿರ್ಮೂಲನ ಆಂದೋಳನದಲ್ಲಿ ಸಾಕಷ್ಟು ಕಾರ್ಯಗಳನ್ನು ಮಾಡಿ, ಸಾಧನೆಗೈದ ಶ್ರೀಯುತರಿಗೆ ರಾಷ್ಟ್ರಮಟ್ಟದಲ್ಲಿ ರೋಟರಿಯಿಂದ ಜೀವಮಾನ ಸಾಧನೆಯ ಪ್ರಶಸ್ತಿ ದೊರಕಿರುವ ಹಿನ್ನೆಲೆಯಲ್ಲಿ ನಮ್ಮ ರೋಟರಿ ಕ್ಲಬ್‌ನ ವತಿಯಿಂದ ಹಾರ್ದಿಕವಾಗಿ ಸನ್ಮಾನಿಸಲಾಯಿತು. ರೊ.ಎನ್.ಜಿ. ಉಷಾರವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟು, ರೊ.ಪಿಡಿಜಿ. ಡಾ.ಪಿ. ನಾರಾಯಣರವರ ಬಗ್ಗೆ ತಾವು ರಚಿಸಿದ ಕವನವನ್ನು ವಾಚನ ಮಾಡಿದರು.

ವಲಯ 10ರ ಸಹಾಯಕ ಗವರ್ನರ್ ರೊ.ಕೆ.ಪಿ.ಶೆಟ್ಟಿಯವರು ಮಾತನಾಡಿ, 4 ಗವರ್ನರ್‌ಗಳನ್ನು ಕೊಟ್ಟಿರುವ, ಸಹಾಯಕ ಗವರ್ನರ್‌ಗಳಂತೂ ಲೆಕ್ಕವೇ ಇಲ್ಲದಂತೆ ನೀಡಿರುವ, ಹಿರಿಯರು, ಮೇಧಾವಿಗಳು ಇರುವಂತಹ ನಿಮ್ಮಂತಹವರುಗಳ ಜೊತೆ ನಾನು ಚಿಕ್ಕವನಾಗಿದ್ದೇನೆ. ಈ ಕ್ಲಬ್ ಒಳ್ಳೆಯ ಹೆಸರು ಪಡೆದಿದೆ. ಅತೀ ಹೆಚ್ಚು ಸದಸ್ಯರನ್ನು ಹೊಂದಿದೆ. ಕಾರ್ಕಳ ಮತ್ತು ರೋಟರಿ ಕ್ಲಬ್ ಶಿವಮೊಗ್ಗ ಮಿಡ್‌ಟೌನ್‌ಗಳೂ ಕೂಡ ಹೆಚ್ಚು ಸದಸ್ಯರುಗಳನ್ನು ಹೊಂದಿವೆ ಎಂದು ತಿಳಿಸುತ್ತಾ, ಮುಂಬರುವ ದಿನಗಳಲ್ಲಿ ಕ್ಲಬ್ ಇನ್ನೂ ಹೆಚ್ಚು ಜನೋಪಯೋಗಿ ಕೆಲಸಗಳನ್ನು ಮಾಡಲಿ ಎಂದು ಆಶಿಸಿದರು. ವಲಯ ಸೇನಾನಿ ರೊ. ಸರ್ಜಾ ಜಗದೀಶ್‌ರವರು ಮಾತನಾಡಿ, ನಾನು ಹುಟ್ಟುವುದಕ್ಕೆ ಮುಂಚೆ ಹುಟ್ಟಿದ ಈ ಕ್ಲಬ್ ಹಲವಾರು ಕೆಲಸಗಳನ್ನು ಮಾಡಿದೆ. ಕೆಲವೊಮ್ಮೆ ಕೆಲವೊಂದು ಸಲಹೆಗಳನ್ನು ಇಲ್ಲಿಂದಲೇ ಪಡೆಯುತ್ತೇವೆ. ಇಲ್ಲಿ ನಾವುಗಳು ಬಂದಿರುವುದು ಇನ್ಸ್ಪೆಕ್ಷನ್‌ಗೆ ಅಲ್ಲ ನಾವು ಕಲಿತುಕೊಂಡು ಹೋಗಲು ಎಂದರು.

ಕಾರ್ಯಕ್ರಮದ ಕೇಂದ್ರ ಬಿಂದು ರೋಟರಿ ಜಿಲ್ಲಾ ಗವರ್ನರ್ ರೊ.ಕೆ.ಪಾಲಾಕ್ಷರವರು ಮಾತನಾಡಿ 68 ವರ್ಷಗಳನ್ನು ಪೂರೈಸಿದ ಈ ಕ್ಲಬ್‌ಗೆ ಭೇಟಿ ನೀಡುವುದೇ ಒಂದು ಸುದೈವ. ಇಲ್ಲಿನ ಕಾರ್ಯಕ್ರಮ ನೋಡಿ ಅನುಭವಿಸಿ, ಬೇರೆಯವರಿಗೆ ಹೇಳಬಹುದು. ಉದಾಹರಣೆಗೆ ರೊ.ಪಿಡಿಜಿ. ಡಾ.ಪಿ.ನಾರಾಯಣರವರಿಂದ ಒದಗಿ ಬಂದ ಗ್ಲೋಬಲ್ ಗ್ರಾಂಟ್ ಉದಾಹರಣೆ. ಗೌತಮಪುರದಲ್ಲಿ 40 ಲಕ್ಷ ರೂ ವೆಚ್ಚದಲ್ಲಿ ಛಲ ಬಿಡದೇ ಕಾರ್ಯಯೋಜನೆ ತಂದರು. ಗ್ರಾಮಾಂತರ ಶಾಲೆಯನ್ನು ಅತ್ಯಂತ ಉತ್ತಮ ಶಾಲೆ ಮಾಡಿದ್ದಾರೆ. ಟಾಯ್ಲೆಟ್, ಕೈತೊಳೆಯಲು ನೀರಿನ ಹರಿವಿಗಾಗಿ ಸೆನ್ಸಾರ್ ಅಳವಡಿಸಿದ್ದಾರೆ. ಇಂಥಹ ಕಾರ್ಯ ಯೋಜನೆಗಳನ್ನು ಕೈಗೊಂಡು ಅನುಷ್ಠಾನಗೊಳಿಸಿದ ಎಲ್ಲಾ ಕ್ರೆಡಿಟ್ ನಿಮ್ಮ ಕ್ಲಬ್‌ಗೆ ಸೇರುತ್ತದೆ ಎಂದರು.

ಇವತ್ತಿನ ಕ್ಲಬ್ ಅಸೆಂಬ್ಲಿಯಲ್ಲಿ ತಿಳಿಸಿದಂತೆ, ರೋಟರಿ ಫೌಂಡೇಷನ್‌ಗೆ ದೇಣಿಗೆ ಸಂಗ್ರಹ ಮುಖ್ಯ. ಫೌಂಡೇಷನ್ ಒಂದು ದೊಡ್ಡ ದೇವಸ್ಥಾನವಿದ್ದಂತೆ. ಎಷ್ಟು ಕೊಟ್ಟರೂ ಕಡಿಮೆಯೇ. ಇನ್ನೂ ಹತ್ತಾರು ಗ್ರಾಂಟ್‌ಗಳನ್ನು ಕೊಡಬಹುದು. ಇಂದು ನಿಮ್ಮ ಕ್ಲಬ್‌ನಿಂದ ಸುಮಾರು 4 ಲಕ್ಷ ದೇಣಿಗೆ ನೀಡುತ್ತಿರುವುದು ಸುತ್ಯಾರ್ಹವಾದುದು. ಫೌಂಡೇಷನ್‌ನಿಂದ ಎಷ್ಟೆಲ್ಲಾ ಕೆಲಸಗಳಿಗೆ ಹಣ ಸದ್ವಿನಿಯೋಗವಾಗುತ್ತಿದೆ. ಮಕ್ಕಳ ಹೃದಯ ಶಸ್ತ ಚಿಕಿತೆಗಳಿಗೆ, 20000 ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆಗೆ, 200 ಕ್ಕೂ ಹೆಚ್ಚು ಶಾಲೆಗಳ ನೆರವಿಗೆ. 200 ಕ್ಕೂ ಹೆಚ್ಚು ಡಯಾಲಿಸೀಸ್ ಸೆಂಟರ್‌ಗಳ ಪ್ರಾರಂಭಕ್ಕೆ, 50 ಕ್ಕೂ ಹೆಚ್ಚು ಚಕ್ ಡ್ಯಾಂಗಳ ನಿರ್ಮಾಣಕ್ಕೆ. ಕುಡಿಯುವ ನೀರಿನ ವ್ಯವಸ್ಥೆಗೆ. ಹೀಗೆ ಹಲವಾರು ಕಾರ್ಯಗಳನ್ನು ರೋಟರಿ ಫೌಂಡೇಷನ್‌ನಿಂದ ಮಾಡಲಾಗುತ್ತಿದೆ.

ಇಂದಿನ ದಿನಮಾನದಲ್ಲಿ ಯುವಕರನ್ನು ರೋಟರಿಗೆ ಕರೆ ತರಬೇಕು. ಅದಕ್ಕಾಗಿ ರೋಟರಾಕ್ಟ್ ಮತ್ತು ಇಂಟರಾಕ್ಟ್ ಕ್ಲಬ್‌ಗಳು ಹೆಚ್ಚು ಕ್ರಿಯಾ ಶೀಲವಾಗಿರಬೇಕು. ಹೆಚ್ಚು ಸಮಾಜ ಮುಖಿ ಕೆಲಸಗಳನ್ನು ಮಾಡಬೇಕು. ಎಲ್ಲಾ ಕಡೆಯಲ್ಲಿಯೂ ರೋಟರಿ ಪಸರಿಸಬೇಕು. ನಮ್ಮ ಮಕ್ಕಳಿಗೆ ಸಮಾಜದಲ್ಲಿ ಹೇಗೆ ಸಮಸ್ಯೆಗಳನ್ನು ಎದುರಿಸಬೇಕು ಎಂದು ಕಲಿಸುತ್ತಿಲ್ಲ. ಸಮಾಜವನ್ನು ಫೇಸ್ ಮಾಡುವ ಗುಣಗಳನ್ನು ಬೆಳೆಸಲು ರೋಟರಾಕ್ಟ್ ಇಂಟರಾಕ್ಟ್‌ಗಳು ಬೇಕು. ಒಳ್ಳೆಯ ನಾಯಕರಾಗಿ ಬೆಳೆಯಲು ಇವೆಲ್ಲವೂ ಸಹಕಾರಿಯಾಗುತ್ತವೆ. ನಾವು ಮಾಡುವ ಕೆಲಸಗಳನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು ಎಲ್ಲಾ ರೀತಿಯ ಶ್ರಮಗಳನ್ನು ಹಾಕಬೇಕು. ಇವುಗಳಿಗೆ ಪೂರಕವಾಗುವಂತೆ ಅನೇಕ ಉದಾಹರಣೆಗಳನ್ನು ನಮ್ಮ ಮುಂದಿರಿಸಿದರು. ಅಧ್ಯಕ್ಷರಾದ ರೊ.ಆನಂದರವರು ಅವರ ತಂಡದೊಂದಿಗೆ 122 ಸದಸ್ಯರನ್ನು ಹೊಂದಿರುವ ಕ್ಲಬ್‌ನ ಅಧ್ಯಕ್ಷರಾಗಿ ಚೆನ್ನಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ಈಗ ಅರ್ಧ ವರ್ಷ ಮುಗಿದಿದೆ. ಇನ್ನುಳಿದ ದಿನಗಳಲ್ಲಿ ಸಿಕ್ಕ ಅವಕಾಶಗಳನ್ನು ಚೆನ್ನಾಗಿ ಬಳಸಿಕೊಳ್ಳಲು ಕಿವಿಮಾತು ಹೇಳಿದರು. ಅಲ್ಲದೇ ಮುಂದಿನ ವರ್ಷ ಜನವರಿ ತಿಂಗಳಲ್ಲಿ ಹಾಸನದಲ್ಲಿ ನಡೆಯಲಿರುವ ರೋಟರಿ ಸಮ್ಮೇಳನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ ಮಾಡಿಕೊಂಡು ತಮ್ಮ ಮಾತನ್ನು ಮುಗಿಸಿದರು.

ಗೌರವಾರ್ಥವಾಗಿ ಗವರ್ನರ್ ರೊ. ಕೆ. ಪಾಲಾಕ್ಷರವರನ್ನು ಅವರ ಪತ್ನಿ ರೋಟರಿ ಜಿಲ್ಲೆ 3182 ರ ಪ್ರಥಮ ಮಹಿಳೆ ಶ್ರೀಮತಿ ರೇಖಾ ಪಾಲಾಕ್ಷರವರೊಂದಿಗೆ ಸನ್ಮಾನಿಸಲಾಯಿತು. ಜೊತೆಗೆ ವಲಯ 10 ರ ಸಹಾಯಕ ಗವರ್ನರ್ ರೊ. ಕೆ.ಪಿ.ಶೆಟ್ಟಿ ಮತ್ತು ವಲಯ ಸೇನಾನಿ ರೊ.ಸರ್ಜಾ ಜಗದೀಶ್‌ರವರಿಗೆ ಆತ್ಮೀಯವಾಗಿ ಅಭಿನಂದಿಸಲಾಯಿತು. ಮಾಜಿ ಸಹಾಯಕ ಗವರ್ನರ್ ರೊ.ಸುನಿತಾ ಶ್ರೀಧರ್, ರೊ.ಎಸ್. ಮಂಜುನಾಥ್, ರೊ.ಕೆ. ಸೂರ್ಯನಾರಾಯಣ ಉಡುಪರವರು, ರೊ.ಎನ್.ವಿ.ಭಟ್ ಮುಂತಾದವರು ಈ ಕಾರ್ಯಕ್ಕೆ ಸಹಕರಿಸಿದರು. ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ.ಆರ್. ಆನಂದರವರು ಮಾತನಾಡಿ, ಈ ಕ್ಲಬ್‌ನಲ್ಲಿ ಎಲ್ಲರಿಗಿಂತ ಕಿರಿಯ ನಾನೇ. ಆದುದರಿಂದ ಯಾರು ಏನೇ ಹೇಳಿದರೂ ಆ ಕೆಲಸವನ್ನು ಮಾಡುತ್ತಾ ಬಂದಿದ್ದೇನೆ. ಕ್ಲಬ್‌ಗೆ ಯಾವುದೇ ತೊಂದರೆ ಬಾರದ ರೀತಿಯಲ್ಲಿ ನಿಭಾಯಿಸುತ್ತಿದ್ದೇನೆ. ಇನ್ನು ಮುಂದೆಯೂ ತಮ್ಮೆಲ್ಲರ ಸಲಹೆ ಸಹಕಾರವಿರಲಿ ಎಂದರು.

ಕೊನೆಯಲ್ಲಿ ರೊ.ವಿಶ್ವಾಸ್ ಎಲಬುರ್ಗಿಯವರು ಸರ್ವರನ್ನು ವಂದಿಸಿದರು. ಅಲ್ಲದೇ ಅಂದು ಇಡೀ ದಿನ ನಡೆದ ಗವರ್ನರ್ ಭೇಟಿಯ ಎಲ್ಲಾ ಸಂದರ್ಭಗಳಲ್ಲೂ ಉಟೋಪಚಾರವನ್ನು ರಾತ್ರಿಯ ಪುಷ್ಕಳ ಭೋಜನದ ವ್ಯವಸ್ಥೆಯನ್ನು ಮಾಡಿದ ರೊ.ಬಿ.ಎಸ್. ಮಹಾದೇವ ಮತ್ತು ರೊ. ನಿರ್ಮಲ ಮಹದೇವ್ ಅವರಿಗೂ ಸಹ ವಂದಿಸಿದರು.

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

## ರೋಟರಿ ಕ್ಲಬ್ ಶಿವಮೊಗ್ಗದ ವತಿಯಿಂದ ರೋಟರಿ ಗ್ಲೋಬಲ್ ಗ್ರಾಂಟ್ ಅನುದಾನದಡಿಯಲ್ಲಿ ಸಾಗರ ತಾಲೂಕು ಗೌತಮಪುರ ಗ್ರಾಮದ ವಿದ್ಯಾಭಾರತಿ ಆಂಗ್ಲ ಮಾಧ್ಯಮ ಶಾಲೆ ನವೀಕರಣ ಕಾಮಗಾರಿ ಲೋಕಾರ್ಪಣೆ ಕಾರ್ಯಕ್ರಮ












ದಿನಾಂಕ: 03.12.2025 ರ ಬುಧವಾರ ನಮ್ಮ ಕ್ಲಬ್‌ಗೆ ಗವರ್ನರ್ ರೊ. ಕೆ. ಪಾಲಾಕ್ಷರವರ ಅಧಿಕೃತ ಭೇಟಿಯ ಸಂದರ್ಭದಲ್ಲಿ ಗ್ಲೋಬಲ್ ಗ್ರಾಂಟ್ ಯೋಜನೆಯಡಿಯಲ್ಲಿ ಗೌತಮಪುರದಲ್ಲಿರುವ ಗ್ರಾಮಾಂತರ ವಿದ್ಯಾ ಭಾರತಿ ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ಶಾಲಾ ಕಟ್ಟಡದ ನವೀಕರಣ, ಪೀಠೋಪಕರಣಗಳು, ಶೌಚಾಲಯ ಮತ್ತು ಕಂಪ್ಯೂಟರ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ನಮ್ಮ ರೋಟರಿ ಸದಸ್ಯರು ಬಹಳ ಸಂಭ್ರಮದಿಂದ ಪಾಲ್ಗೊಂಡಿದ್ದರು.

ಸಾಗರ ತಾಲೂಕು ಗೌತಮಪುರ ಗ್ರಾಮದಲ್ಲಿ ಒಂದು ಇಂಗ್ಲೀಷ್ ಮಾಧ್ಯಮ ಶಾಲೆ ಕಟ್ಟಿ ಗ್ರಾಮೀಣ ಭಾಗದ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಓದಿ ಸಮಾಜದಲ್ಲಿ ಛಾಪು ಮೂಡಿಸಲಿ ಎನ್ನುವ ಸದುದ್ದೇಶದಿಂದ ಶ್ರೀಮತಿ ನಾಗರತ್ನ ಎಸ್.ಕೆ. ಇವರು ಅನುದಾನ ರಹಿತ ಶಾಲೆ ನಡೆಸುತ್ತಿದ್ದಾರೆ. ಈ ಶಾಲೆಗೆ ಒಮ್ಮೆ ಭೇಟಿ ನೀಡಿದ ನಮ್ಮ ಕ್ಲಬ್‌ನ ಹೆಮ್ಮೆಯ ರೋಟರಿ ಸದಸ್ಯರಾದ ರೊ.ವೀರಣ್ಣ ಎ. ಹುಗ್ಗಿಯವರು ಗ್ಲೋಬಲ್ ಗ್ರಾಂಟ್ ಅಡಿಯಲ್ಲಿ ಕಟ್ಟಡದ ನವೀಕರಣ, ಶೌಚಾಲಯ ನಿರ್ಮಾಣ ಕುರಿತು ರೋಟರಿ ಸಂಸ್ಥೆಯನ್ನು ಸಂಪರ್ಕಿಸಲು ತಿಳಿಸಿದ್ದರು. ಶ್ರೀಮತಿ ನಾಗರತ್ನರವರ ಇಬ್ಬರು ಪುತ್ರರು (ಶ್ರೀ ವೈಭವ್ ಮತ್ತು ಶ್ರೀ ನವನೀತ್) ಒಬ್ಬರು ಇಂಡಿಯನ್ ಇನ್ಸ್‌ಟ್ಯೂಟ್‌ನಲ್ಲಿ ವಿಜ್ಞಾನಿಯಾಗಿಯೂ, ಮತ್ತೊಬ್ಬರು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ಹುದ್ದೆಗಳನ್ನು ನಿರ್ವಹಿಸಿಕೊಂಡೇ ಪ್ರತೀ ಶನಿವಾರ ಮತ್ತು ಭಾನುವಾರ ಊರಿಗೆ ಬಂದು ಅಮ್ಮನ ಕನಸು ನನಸಾಗಿಸಲು ಶ್ರಮಿಸುತ್ತಿದ್ದಾರೆ. ವಿಷಯ ತಿಳಿದ ಸಹೋದರರು ಆ ವೇಳೆಯಲ್ಲಿ ಸಹಾಯಕ ಗವರ್ನರ್ ಆಗಿದ್ದ ರೊ.ಸುನೀತಾ ಶ್ರೀಧರ್‌ರವರನ್ನು ಸಂಪರ್ಕಿಸಿ ಅನುದಾನ ದೊರಕುವ ಬಗ್ಗೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಮಾಹಿತಿಯನ್ನು ಪಡೆಯುತ್ತಾರೆ. ರೊ. ಸುನೀತಾ ಶ್ರೀಧರ್‌ರವರು ರೋಟರಿಯ ಪಿತಾಮಹ ರೊ. ಡಾ.ಪಿ.ನಾರಾಯಣರವರಿಗೆ ಶಾಲೆಯ ಬಗ್ಗೆ ತಿಳಿಸಿ ರೋಟರಿ ಗ್ಲೋಬಲ್ ಗ್ರಾಂಟ್ ಮಂಜೂರು ಮಾಡಿಸುವಲ್ಲಿ ಯಶಸ್ವಿಯಾಗುತ್ತಾರೆ.

ರೊ. ಸೆಂಥಿಲ್ ವೇಲನ್ 2024–25 ನೇ ಸಾಲಿನ ಅಧ್ಯಕ್ಷರಾಗಿದ್ದ ಸಮಯದಲ್ಲಿ ಮಂಜೂರಾಗಿದ್ದ ಗ್ರಾಂಟ್‌ನಲ್ಲಿ ಈ ವರ್ಷ ಗವರ್ನರ್ ಭೇಟಿ ವೇಳೆ ಸಂಪೂರ್ಣ ಸಜ್ಜಾಗಿ ಕಟ್ಟಡ ನವ ವಧುವಿನಂತೆ ಕಂಗೊಳಿಸುತ್ತಿದೆ. ಈ ಯಶೋಗಾಥೆಯನ್ನು ರೊ.ಪಿಡಿಜಿ. ಡಾ.ಪಿ. ನಾರಾಯಣರ ಮಾತುಗಳಲ್ಲೆ ಕೇಳೋಣ ಬನ್ನಿ.









'ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣ ನೆಲ್ಲಿಕಾಯಿ ಎತ್ತಣ ಸಮುದ್ರ', ಎನ್ನುವ ವಚನದೊಂದಿಗೆ ಮಾತು ಪ್ರಾರಂಭಿಸಿದ ಡಾ. ಪಿ. ನಾರಾಯಣ್‌ರವರು ಮಾಮರಕ್ಕೂ ಕೋಗಿಲೆಗೂ ಸಂಬಂಧ ಬರಬೇಕಾದರೆ ವಸಂತ ಕಾಲ ಬರಬೇಕು. ಹಾಗೇ ಸಮುದ್ರದ ಉಪ್ಪಿನಿಂದ ನೆಲ್ಲಿಕಾಯಿ ಉಪ್ಪಿನಕಾಯಿ ಆದಾಗ ಸಂಬಂಧ ಉಂಟಾದಂತೆ ದೂರದ ಅಮೇರಿಕಾದ ಫೋರ್ಟ್ ಕಾಲಿನ್ಸ್ ರೋಟರಿ ಕ್ಲಬ್ ಸದಸ್ಯರಾದ, ಮೂಲ ತರಿಕೆರೆಯವರೇ ಆದ ಡಾ. ಸಿ. ಕೃಷ್ಣಮೂರ್ತಿಯವರ ಪರಿಶ್ರಮ ಹಾಗೂ ರೋಟರಿ ಜಾಗತಿಕ ಅನುದಾನ ಸೇರಿ ಈ ಗ್ರಾಮದಲ್ಲಿ ಇಂತಹ ವ್ಯವಸ್ಥಿತ ಶಾಲೆ ನಿರ್ಮಾಣವಾಗಲು ಸಾಧ್ಯವಾಗಿದೆ. ಈ ತರಹದ ಸೆನ್ಸಾರ್ ಜೋಡಿಸಿರುವ ಶೌಚಾಲಯಗಳನ್ನು ಏರ್ ಪೋರ್ಟ್‌ನಲ್ಲಿ ಮಾತ್ರ ನೋಡಲು ಸಾಧ್ಯ. ಪ್ರತೀ ಮಗುವು ಬಿಸಿ ನೀರನ್ನೇ ಕುಡಿಯಲೆಂದು ಜೋಡಿಸಿರುವ ಅತ್ಯಾಧುನಿಕ ಕುಡಿಯುವ ನೀರಿನ ವ್ಯವಸ್ಥೆ, ನೀರು ಪೋಲಾಗದಿರಲು ಜೋಡಿಸಿರುವ ಹೊಸ ತರಹದ ನಲ್ಲಿಗಳು, ಸಣ್ಣ ಮಕ್ಕಳಿಗೆ ಅನುಕೂಲವಾಗಲೆಂದು ವಿವಿಧ ಎತ್ತರಗಳಲ್ಲಿ ಜೋಡಿಸಿರುವ ಉಪಕರಣಗಳು ಎಲ್ಲವೂ ತುಂಬಾ ಅಚ್ಚುಕಟ್ಟಾಗಿವೆ. ಕಂಪ್ಯೂಟರ್ ಲ್ಯಾಬ್‌ನಲ್ಲಿ ಜೋಡಿಸಿರುವ 15 ಕಂಪ್ಯೂಟರ್‌ಗಳು, ಒಂದು ಅತ್ಯಾಧುನಿಕ ಸ್ಮಾರ್ಟ್ ಬೋರ್ಡ್ ಎಲ್ಲವೂ ವ್ಯವಸ್ಥಿತವಾಗಿ ಜೋಡಿಸಲ್ಪಟ್ಟಿವೆ.

ಇವೆಲ್ಲವೂ ಸಾಧ್ಯವಾಗಿದ್ದು ರೋಟರಿಯ ದೇಣಿಗೆಯ ಹಣ ಸದ್ವಿನಿಯೋಗವಾಗಿ, ಕಾರ್ಯರೂಪಕ್ಕೆ ಬಂದಿರುವುದು. ಶಾಲಾ ಕಾರ್ಯದರ್ಶಿ ಶ್ರೀಮತಿ ನಾಗರತ್ನರ ಪುತ್ರದ್ವಯರ ಪರಿಶ್ರಮದಿಂದ, ಅವರಿಗೆ ತಾಯಿಯ ಮೇಲಿರುವ ಪ್ರೇಮದಿಂದ. ಬೆಂಗಳೂರಿನಂತಹ ನಗರದಲ್ಲಿ ಕೆಲಸ ಸಿಕ್ಕಿದರೆ, ಊರು ಪರಿವಾರವನ್ನೇ ಮರೆಯುವ ಇಂದಿನ ಯುವಪೀಳಿಗೆಯವರು ಇವರನ್ನು ಮಾದರಿಯಾಗಿಸಿಕೊಂಡರೆ ಪ್ರತೀ ಊರಲ್ಲೂ ಒಳ್ಳೊಳ್ಳೇ ಕೆಲಸಗಳನ್ನು ಕೈಗೊಂಡು ಗ್ರಾಮೀಣ ಭಾಗದ ಜನರ ನೆಮ್ಮದಿಗೆ ಕಾರಣರಾಗಬಹುದು ಎಂದು ಮನತುಂಬಿ ಶ್ಲಾಘಿಸಿದರು. ಈ ಉಪಕರಣಗಳಿಂದ ಸದುಪಯೋಗ ಪಡೆದು, ಮುಂದೆ ಬರುವ ಮಕ್ಕಳಿಗೂ ಉಪಯೋಗವಾಗುವಂತೆ ಮಾಡಲು ಮಕ್ಕಳಿಗೆ ಕಿವಿ ಮಾತು ಹೇಳಿದರು.

ಸಭೆಯ ಕೇಂದ್ರ ಬಿಂದು ರೋಟರಿ ಜಿಲ್ಲಾ ಗವರ್ನರ್ ರೊ.ಕೆ. ಪಾಲಾಕ್ಷರವರು ಮಾತನಾಡುತ್ತಾ, ಇಂತಹ ಒಂದು ಒಳ್ಳೆಯ ಪ್ರಾಜೆಕ್ಟ್‌ನ್ನು ಉದ್ಘಾಟನೆ ಮಾಡುವುದು ನನ್ನ ಸುದೈವ ಎಂದರಲ್ಲದೇ ಶ್ರಮಿಸಿದ ಎಲ್ಲರಿಗೂ ವಂದನೆಗಳನ್ನು ತಿಳಿಸಿದರು. ಜ್ಞಾನದಿಂದ ಅಹಂಕಾರ ಬಾರದೇ ವಿನಯ ಬಂದರೆ, ಮಾನವರಲ್ಲಿ ಎಂತಹ ಪರಿವರ್ತನೆ ಸಾಧ್ಯ ಎಂಬುದಕ್ಕೆ ವೈಭವ್ ಹಾಗೂ ನವನೀತ್‌ರವರೇ ಸಾಕ್ಷಿ ಎಂದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲರೂ ಪುಷ್ಕಳ ಭೋಜನ ಸ್ವೀಕರಿಸಿ ಮರಳಿದರು. ಈ ಕಾರ್ಯಕ್ರಮವನ್ನು ಆಯೋಜಿಸಿದ ಇಂದಿನ ಅಧ್ಯಕ್ಷ ರೊ.ಆರ್. ಆನಂದ್ ಹಾಗೂ ಹಿಂದಿನ ಅಧ್ಯಕ್ಷ ರೊ. ಸೆಂಥಿಲ್ ವೇಲನ್‌ರವರಿಗೆ ಹಾಗೂ ತಂಡದವರಿಗೆ ಅಭಿನಂದನೆ ಸಲ್ಲಿಸಲಾಯಿತು.

**–ರೊ. ಎನ್.ವಿ. ಭಟ್**

ಮಾಜಿ ಅಧ್ಯಕ್ಷರು, ರೋಟರಿ ಕ್ಲಬ್ ಶಿವಮೊಗ್ಗ

## *Happy Birthday Wishes*



*Dr. Udaya V.Rao*
*04th Dec*



*Suneetha Sreedhar*
*05th Dec*



*Nataraj D.S.*
*07th Dec*



*Sumalatha H.V*
*8th Dec*



*Sandeep*
*9th Dec*



**Rtn. Dr. Rajaram**
10th Dec




**ಗವರ್ನರ್‌ರವರೊಂದಿಗೆ ಕ್ಲಬ್ ಅಸೆಂಬ್ಲಿ**

To,

*Book Post*